# ಹೊಸ ಗೀತಮಂಜರಿ

ಯಾವುದೇ ಜೀವಂತ ಭಾಷೆಯಾದರೂ ದಿನನಿತ್ಯ ಬೆಳೆಯುತ್ತಲೇ ಇರುವಂತಹದ್ದು. ನಮ್ಮ ಕನ್ನಡವೂ ಜನರ ಮಾತಿನಲ್ಲಿ, ಬರವಣಿಗೆಯಲ್ಲಿ, ಹಾಡಿನಲ್ಲಿ ಬಳಕೆಯಾಗುತ್ತ, ಹೊಸಪದ, ನುಡಿಗಟ್ಟು, ಚಿಂತನೆಗಳನ್ನು ಸೇರಿಸಿಕೊಳ್ಳುತ್ತ ಹೊಳಪು ಪಡೆಯುತ್ತ ಇರುತ್ತದೆ. ಯಾವತ್ತು ಅದರ ಬಳಕೆ ದೈನಿಕದಲ್ಲಿ ಕಡಿಮೆಯಾಗುತ್ತದೋ ನಿಧಾನವಾಗಿ ಸಾಯುತ್ತ ಹೋಗುತ್ತದೆ. ಈ ಆತಂಕದ ಹಿನ್ನೆಲೆಯಲ್ಲಿಯೇ ಭಾಷೆಗಳನ್ನು ನಾವು ನೋಡಬೇಕಾಗುತ್ತದೆ. ಇಂಗ್ಲಿಷ್ ಕಲಿಯುವ ಕನ್ನಡ ಕಂದಮ್ಮಗಳು ಕನ್ನಡವನ್ನು ಮರೆಯುತ್ತಿವೆ. ಅವರು ಬಳಸುವ ಇಂಗ್ಲಿಷ್ ಆಗಲೀ, ಕನ್ನಡವಾಗಲೀ ಸಪಾಟಾದ ವ್ಯಾವಹಾರಿಕ ಭಾಷೆಗಳಾಗಿವೆ. ನಿತ್ಯದ ಅಗತ್ಯಕ್ಕೆ ಬೇಕಾದ ಕೆಲವೇ ಪದಗಳು ಅವರ ತುಟಿಯಿಂದ ಜಾರುತ್ತವೆ. ಅದು ನಗರಗಳಲ್ಲಿ ಇನ್ನೂ ಹೆಚ್ಚು.

ಕನ್ನಡದ ಹಲವಾರು ಪದಗಳು ಕಣ್ಮರೆಯಾಗುತ್ತಿವೆ. ಅಪರೂಪದ ಪದಗಳೊಂದಿಗೆ ನುಡಿಗಟ್ಟುಗಳು, ಗಾದೆಗಳು, ಅದರ ಲಯಗಳು ಬಳಕೆ ಇಲ್ಲದೇ ಮರೆತೇ ಹೋದಂತಾಗಿವೆ. ಆ ಮಟ್ಟಿಗೆ ಕನ್ನಡ ಭಾಷೆ ಬಡವಾಗುತ್ತ ಹೋಗಿದೆ. ಜವಾರಿ ಕನ್ನಡ ಇರುವುದು ಕೂಡ ಹಳ್ಳಿಯ, ಇಲ್ಲವೇ ಅಲ್ಲಿನ ಸಂಪರ್ಕ ಇರುವ ಹಳಬರ ಬಾಯಲ್ಲಿ. ಹಳಬರ ಮಾತುಗಳನ್ನು ಕೇಳಿದ ಆಧುನಿಕ ಶಿಕ್ಷಣ ಪಡೆದ ಹೊಸಹುಡುಗರು ನಿಘಂಟುಗಳಿಗೆ ತಡಕಾಡಿದರೆ ಆಶ್ಚರ್ಯವಿಲ್ಲ. ಆ ಪದಗಳ ಅರ್ಥಗಳು ನಿಘಂಟುಗಳಲ್ಲಿ ಸಿಗುವುದೂ ಅನುಮಾನ. ಭಾಷೆಯೊಂದು ನಿಘಂಟು, ಶಾಸ್ತ್ರಗಳನ್ನು ಮೀರಿ ಬೆಳೆಯುತ್ತಿರುತ್ತದೆ; ಜೊತೆಗೆ ನಿಘಂಟು–ಶಾಸ್ತ್ರಗಳು ಹಿಡಿಯಲಾಗದಷ್ಟು ವಿಸ್ತಾರವೂ ಆಗಿರುತ್ತದೆ. ಆದರೆ, ಭಾಷೆ ಸಾಹಿತ್ಯ ಕೃತಿಗಳಲ್ಲಿ ಕಳೆದುಹೋಗದಂತೆ ದಾಖಲಾಗಿರುತ್ತದೆ. ಉತ್ತಮ ಲೇಖಕರು ಬೇರೆಯದೇ ಆದ ಕನ್ನಡವನ್ನು ತಮ್ಮ ಕೃತಿಗಳಲ್ಲಿ ಸೃಷ್ಟಿಸುತ್ತ ಇರುತ್ತಾರೆ. ಹಾಗೆ ಸೃಷ್ಟಿಯಾದ ಬರವಣಿಗೆಯ ಸಮೂಹ ನಮ್ಮ ಕಣ್ಣೆದುರಿಗೇ ಇದೆ. ಭಾಷೆಯ ಜೀವಂತಿಕೆಗೆ ಅವೂ ಕಾರಣ.

ಕನ್ನಡ ನುಡಿ ಮತ್ತು ನಾಡಿನ ಹಿರಿಮೆ, ಗರಿಮೆ, ಪ್ರೀತಿ, ಗೌರವ, ಮಹತ್ವವನ್ನು ಸಾರುವ ನಾಡಗೀತೆಗಳು ಕನ್ನಡಿಗರ ಹೆಮ್ಮೆಯ ಗುರುತು. ಕುವೆಂಪು ಅವರ 'ಜಯ ಭಾರತ ಜನನಿಯ ತನುಜಾತೆ', ಡಿ.ಎಸ್. ಕರ್ಕಿ ಅವರ 'ಹಚ್ಚೇವು ಕನ್ನಡದ ದೀಪ'ದಂತಹ ಗೀತೆಗಳು ಯಾವತ್ತಿಗೂ ಕನ್ನಡಿಗರ ಮನಸ್ಸನ್ನು ಅರಳಿಸುವಷ್ಟು ಶಕ್ತವಾಗಿವೆ. ಒಂದುಕಾಲದ ನಾಡಗೀತೆಗಳ ಹುಲುಸುಬೆಳೆ ಕಡಿಮೆಯಾಗುತ್ತ ನಿಂತೇ ಹೋಯಿತು. ಈ ಕಾಲದಲ್ಲಿ ನಾಡಗೀತೆಗಳ ತುರ್ತು ತುಸುಹೆಚ್ಚೇ ಇದೆ. ಈ ದಿಸೆಯಲ್ಲಿ 'ಮಯೂರ' ಹೊಸ ನಾಡಗೀತೆಗಳನ್ನು ಬರೆಸಿ ಪ್ರಕಟಿಸುತ್ತಿದೆ. ಈ ಸಂಚಿಕೆಯಲ್ಲಿರುವ 'ಕನ್ನಡ ಗೀತಮಂಜರಿ' ಈವರೆಗೆ ಬಂದ ನಾಡಗೀತೆಗಳಿಗೆ ಹೊಸಸೇರ್ಪಡೆ. ಗೀತೆಗಳ ಜೊತೆಗೆ ಕವಿಗಳೇ ಬರೆದಿರುವ ಟಿಪ್ಪಣಿಗಳು ನಾಡಗೀತೆಗಳ ಕುರಿತು ಹೊಸನೋಟಗಳನ್ನು ಕೊಡುತ್ತವೆ. 'ಕನ್ನಡ ಗೀತಮಂಜರಿ' ಈ ಸಂಚಿಕೆಯ ವಿಶೇಷವಾಗಿದೆ.

ಸುಮಾರು ಆರು ದಶಕಗಳಿಂದ ವಿಮರ್ಶೆಯನ್ನು ಬರೆದುಕೊಂಡು ಬಂದ ಹಿರಿಯ ವಿಮರ್ಶಕ ಜಿ.ಎಸ್. ಆಮೂರ ಅವರ ಸಂದರ್ಶನ ಈ ಸಂಚಿಕೆಯಲ್ಲಿದೆ. ಆಮೂರರ ಮಾತುಗಳು ಸಾಹಿತ್ಯರಸಿಕರಿಗೆ ಹೊಸಮಿಂಚುಗಳನ್ನು ಕೊಡಬಲ್ಲವು.

**ಸಂದೀಪ ನಾಯಕ**